

# ಚರಿತ್ರೆಯ ಪುಟ ಸೇರಿದ ತೇಲುತ್ತಿದ್ದ ನಾವೆ



ಹೊಳೆ ದಾಟಲು ಪ್ರವಾಸಿಗರಿಗೆ ನೆರವಾಗುತ್ತಿದ್ದ ಲಾಂಚ್

## ಮೂಕವೇದನೆಗೆ ಚಿಗುರು

ಮುಂಗಾರಿನ ಅಭಿಷೇಕಕೆ ಚೆಲುವು ಪುಟಿದೇಳುತ್ತದೆ ಎನ್ನುವುದು ಕವಿ ಆಶಯ. ಮಲೆಕಾಡಿನ ಮಲೆ ಪರ್ವತ, ಜಲ ಝರಿಗಳ ಆ ಸೋಬಗನ್ನೇ ಪ್ರವಾಸಿ ಕಣ್ಣು ನೋಡಬಯಸುತ್ತದೆ. ಜಲಪಾತ ಎಂದರೆ ಥಟ್ಟನೆ ನೆನಪಾಗುವುದು ಜೋಗ. ಸಾಯುವುದರೊಳಗೆ ಒಮ್ಮೆ ನೋಡಬೇಕಾದ ಜೋಗ ಮತ್ತು ಶರಾವತಿ ನದಿಗೆ ಕಟ್ಟಿರುವ ಅಣೆಕಟ್ಟಿನ ವಿಹಂಗಮ ನೋಟ ನಿಸರ್ಗ ಪ್ರೇಮಿಗಳ ಮನತಣಿಸುತ್ತದೆ. ಹರಿಯುವ ಶರಾವತಿಯನ್ನು ನಿಲ್ಲಿಸಿದ ಲಿಂಗನಮಕ್ಕಿ ಸಾಗರದಂತೆ ನೀರನ್ನು ತಡೆಹಿಡಿದಿದೆ. ಅದು ಹಲವು ಊರು, ಸಹಸ್ರಾರು ಫಲವತ್ತಾದ ಕೃಷಿ ಜಮೀನು, ಸಾವಿರಾರು ಎಕರೆ ದಟ್ಟ ಅರಣ್ಯವನ್ನು ಜಲಸಮ ಮಾಡಿದೆ. ಮುಳುಗಡೆ ಪ್ರದೇಶದ ಸಂತ್ರಸ್ತರ ಕಣ್ಣೀರಿಗೆ ಇನ್ನೂ ಉತ್ತರ ಹುಡುಕಿಲ್ಲ. ಕಾಡ ಕಣಿವೆಯ ಜಲಾಶಯ ಸುಮಾರು 150 ಹಳ್ಳಿಗಳನ್ನು ಮುಳುಗಿಸಿ 3800ಕ್ಕೂ ಅಧಿಕ ಕುಟುಂಬಗಳನ್ನು ಸ್ಥಳಾಂತರಿಸುವಂತೆ ಮಾಡಿತು. ಶತಮಾನಗಳ ಕಾಲ ಬಾಳಿ ಬದುಕಿದ ಹಳ್ಳಿ, ಮನೆ, ಹೊಲಗದ್ದೆಗಳನ್ನು ಕಳೆದುಕೊಂಡ ಬದುಕೂ ಜಲಸಮಾಧಿ ಆಗಿದೆ. ಕೆಲವರ ನೋಟದಲ್ಲಿ ಈ ಮೂಕ ವೇದನೆ ಕಾಣಬಹುದು. ನಾಡಿಗೆ ಬೆಳಕು ನೀಡಿದ ಶರಾವತಿ ಜಲವಿದ್ಯುತ್ ಯೋಜನೆ ಅಸಂಖ್ಯಾತ ಜೀವಗಳ ಕನಸನ್ನು ಕರಗಿಸಿದೆ. ನದಿಪಾತ್ರದಲ್ಲಿ ಅಳಿಯದೆ ಉಳಿದ ಊರು–ಕೇರಿಯ ಜನಜೀವನ ಸಂಪರ್ಕದ ಓರೆಕೋರೆಗಳ ನಡುವೆ ನಲುಗಿದ್ದವು. ದ್ವೀಪದಂತೆ ಅರೆಸಂಪರ್ಕದಿಂದ ಕೊರಗಿದ್ದ ಜನರ ಆರು ದಶಕಗಳ ಹಂಬಲದ ಆಸೆಗೆ ಸೇತುವೆ ಭರವಸೆಯನ್ನು ತುಂಬಿದೆ. ಶರಾವತಿಯ ಮಡಿಲ ಮಕ್ಕಳ ಸಮಾಧಾನ ಅವನ್ನೀಗ ಹರ್ಷದ ಕಡಲಲ್ಲಿ ಮುಳುಗಿಸಿದೆ. ಸಿಂಗಾರದ ಸಿಂಗದೂರು ತೂಗುಸೇತುವೆ ತೇಲುತ್ತಿದ್ದ ನಾವೆಗೆ ವಿಶ್ರಾಂತಿಯನ್ನು ನೀಡಿದೆ.

ಸಿಗಂದೂರು, ಸಾಗರದಿಂದ ಸುಮಾರು 33 ಕಿ.ಮೀ. ದೂರದಲ್ಲಿದೆ. ಅಲ್ಲಿಂದ 30 ಕಿ.ಮೀ. ಸಾಗಿದರೆ ಹೊಳೆಬಾಗಿಲಿಗೆ ಬಂದು ನಿಲ್ಲುತ್ತೇವೆ. ಎದುರಿಗೆ ಲಿಂಗನಮಕ್ಕಿ ಅಣೆಕಟ್ಟಿನ ಹಿನ್ನೀರು ಎದುರಾಗುತ್ತದೆ.

ಆಳವಾದ ನೀರನ್ನು ದಾಟಲು ಲಾಂಚ್ (Launch) ಬಳಸುತ್ತಿದ್ದರು. ಈ ಮಾರ್ಗದಲ್ಲಿ ಬರುವ ಬಸ್, ಕಾರು ಸೇರಿದಂತೆ ಯಾತ್ರಿಗಳೆಲ್ಲ ಆ ಲಾಂಚ್‌ನಲ್ಲಿಯೇ ಪ್ರಯಾಣಿಸುತ್ತಿದ್ದರು. ಸುಮಾರು 2 ಕಿಲೋ ಮೀಟರ್ ದೂರದ ನೀರ ಮೇಲಿನ ಪ್ರಯಾಣವನ್ನು ಯಾತ್ರಿಗಳು ಹರ್ಷದಿಂದ ಅನುಭವಿಸುತ್ತಿದ್ದರು. ಈಗ ಆ ಮಾರ್ಗಕ್ಕೆ ಸೇತುವೆ ನಿರ್ಮಾಣವಾಗಿದ್ದು, 'ದೇಶದ ಎರಡನೇ ಅತಿ ಉದ್ದದ ತೂಗುಸೇತುವೆ' ಎನ್ನುವ ಖ್ಯಾತಿಗೆ ಪಾತ್ರವಾಗಿದೆ. ರಸ್ತೆ ಮಾರ್ಗದಲ್ಲಿ ಬರುವವರಿಗೆ ಕೊಲ್ಲೂರು ತುಮರಿ ಮೂಲಕ ಮಾತ್ರ ಅವಕಾಶ ಇತ್ತು. ಈಗ ಸಾಗರದಿಂದಲೂ ಹೋಗಬಹುದು.

ಮೂರೂ ದಿಕ್ಕಿನಿಂದಲೂ ನೀರೇ ಆವರಿಸುವುದರಿಂದ ಆ ತಾಣ ಯಾತ್ರಿಗಳ ಕಣ್ಣೋಟಕ್ಕೆ ರಸದೌತಣವನ್ನು ಬಡಿಸುವಂತಿದೆ. ಸಾವಿರಾರು ಯಾತ್ರಾರ್ಥಿಗಳು ನಿತ್ಯವೂ ಇಲ್ಲಿಗೆ ಭೇಟಿ ನೀಡುತ್ತಾರೆ. ಮೊದಲೆಲ್ಲ ಲಾಂಚ್ ಹತ್ತಲು ತವಕದಿಂದ ಜನ ಕಾಯುತ್ತಿದ್ದರು. ಅನಿಯಮಿತವಾಗಿ ಬರುವ ಲಾಂಚ್ ನೀರ ತೆರೆಗಳ ಮೇಲೆ ತೇಲುವ ಅನುಭವವೇ ಭಿನ್ನ. ಮಕ್ಕಳ ಹರ್ಷೋದ್ಗಾರಗಳ ನಡುವೆ ಭಕ್ತಿ ಭಾವದಿಂದ ಶಾಂತಿ ಅರಸಿ ಬರುವ ಭಕ್ತ ಜನರಲ್ಲೂ ಸಂತಸ ತುಂಬುತ್ತಿತ್ತು.

ಈಗ ಲಾಂಚ್ ಪಯಣ ಚರಿತ್ರೆಯ ಪುಟವನ್ನು ಸೇರಿದೆ. ತನ್ನ ಬಾಹು ಚಾಚಿರುವ ಸೇತುವೆ ಹೊಸ ಅನುಭವವನ್ನು ನೀಡುತ್ತಿದೆ. ಸೇತುವೆ ಆಗಲೇಬೇಕು ಎನ್ನುವುದು ಆ ಭಾಗದ ಜನರ ಬಹುದಿನಗಳ ಬೇಡಿಕೆ ಕೂಡ. ಈಗದು ದೇಶದ ಎರಡನೇ ಅತಿ ಉದ್ದದ ತೂಗು ಸೇತುವೆ ಎಂಬ ಇತಿಹಾಸವನ್ನೂ ಸೃಷ್ಟಿಸಿದೆ.

ಇನ್ನು ಮುಂದೆ ಅಂಬಾರಗೋಡ್ಲು–ಕಳಸವಳ್ಳಿ ನಡುವಿನ ನೂತನ ಸಿಗಂದೂರು ತೂಗು ಸೇತುವೆ ಚೌಡೇಶ್ವರಿಯ ಗಿರಿಗೆ ಹಗಲಿರುಳೆನ್ನದೆ ಹೋಗಬಹುದು. ಮೊದಲಾಗಿದ್ದರೆ ಹಗಲು ಹೊತ್ತು ಮಾತ್ರ ಲಾಂಚ್ ಸಂಚರಿಸುತ್ತಿದ್ದವು. ಸುತ್ತಲೂ ಪ್ರವಾಸಿ ತಾಣಗಳು ಹೆಚ್ಚಿವೆ. ಜೋಗಜಲಪಾತ ಸೇರಿದಂತೆ ಕೆಳದಿ ಇಕ್ಕೇರಿಯಂಥ ಐತಿಹಾಸಿಕ ಸ್ಥಳಗಳೂ ಇವೆ.